## ಮತಬ್ಯಾಂಕ್ ರಾಜಕೀಯಕ್ಕಾಗಿ ಕಾಂಗ್ರೆಸ್ ವಿರೋಧ

# ದೇಶದ ಹಿತಕ್ಕೆ ಪೌರತ್ವ ಕಾಯಿದೆ




1947ರಲ್ಲಿ, ಭಾರತ ಮತ್ತು ಪಾಕಿಸ್ತಾನಗಳು ಜನಿಸಿದವು. ಒಂದು ಜಾತ್ಯತೀತ ದೇಶವಾಗಿ ತನ್ನ ಎಲ್ಲ ನಾಗರಿಕರಿಗೆ ಧರ್ಮವನ್ನು ಲೆಕ್ಕಿಸದೆ ಮೂಲಭೂತ ಹಕ್ಕುಗಳನ್ನು ನೀಡಿದೆ. ಮತ್ತು ಇನ್ನೊಂದು ಇಸ್ಲಾಮಿಕ್ ರಾಷ್ಟ್ರವಾಗಿದೆ. ಎರಡೂ ರಾಷ್ಟ್ರಗಳಲ್ಲಿ ಅಲ್ಪಸಂಖ್ಯಾತ ಧರ್ಮಗಳಿವೆ.

73 ವರ್ಷಗಳ ನಂತರ, ಇಸ್ಲಾಂ ಅಧಿಕೃತ ಧರ್ಮ ಮತ್ತು ಇಸ್ಲಾಮಿಕ್ ಕಾನೂನಿನ ಆಡಳಿತ ಹೊಂದಿರುವ ಪಾಕಿಸ್ತಾನದಂತಹ ದೇಶಗಳಲ್ಲಿ, ಹಿಂದೂಗಳು, ಸಿಖ್ಖರು, ಕ್ರಿಶ್ಚಿಯನ್ನರು, ಬೌದ್ಧರು ಮುಂತಾದ ಅಲ್ಪಸಂಖ್ಯಾತರು ಭಯ ಮತ್ತು ಅಪಾಯದಲ್ಲಿ ವಾಸಿಸುತ್ತಿದ್ದಾರೆ. ಜನಾಂಗೀಯ ಶುದ್ಧೀಕರಣ ಮತ್ತು ಕಿರುಕುಳದ ಬಲಿಪಶುಗಳಾಗಿದ್ದಾರೆ. ಅಲ್ಪಸಂಖ್ಯಾತರನ್ನು ಪರಸ್ಪರ ರಕ್ಷಿಸುವ ಕುರಿತು 1950ರ ನೆಹರೂ-ಲಿಯಾಖತ್ ಒಪ್ಪಂದದ ಬಳಿಕವೂ ಇದು ನಡೆದಿದೆ. ಈ ಒಪ್ಪಂದದ ವೈಫಲ್ಯದ ಕಂದಾಯವನ್ನು ಇಂದಿಗೂ ಜನ ಕಟ್ಟುತ್ತಿದ್ದಾರೆ. ಸಾಂದರ್ಭಿಕ ಕೋಮು ಗಲಭೆಗಳ ಹೊರತಾಗಿಯೂ ಭಾರತದಲ್ಲಿ ಅಲ್ಪಸಂಖ್ಯಾತರು ಬೆಳೆದು ಅಭಿವೃದ್ಧಿ ಹೊಂದಿದ್ದಾರೆ.

ಜನಾಂಗೀಯ ಶುದ್ಧೀಕರಣ, ಬಲವಂತದ ಮತಾಂತರ ಮತ್ತು ಹಿಂಸಾಚಾರದ ಉದ್ದೇಶಪೂರ್ವಕ ಅಭಿಯಾನದ ಪರಿಣಾಮವಾಗಿ, ಪಾಕಿಸ್ತಾನ, ಅಫಘಾನಿಸ್ತಾನ ಮತ್ತು ಬಾಂಗ್ಲಾದೇಶಗಳಲ್ಲಿನ ಅಲ್ಪಸಂಖ್ಯಾತರ ಶೇಕಡಾವಾರು ಕುಸಿದಿದೆ. ಕಿರುಕುಳಕ್ಕೊಳಗಾದ ಮತ್ತು ದುರ್ಬಲ ಪೌರರಾಗಿ ಇವರಿದ್ದು, ಇವರ ಜೀವಿಸುವ ಹಕ್ಕು ಭದ್ರವಾಗಿಲ್ಲ. ಆ ದೇಶಗಳು ಪದೇ ಪದೆ ಕೆಟ್ಟ ಹಿಂಸಾಚಾರಗಳಿಗೆ ಒಳಗಾಗುತ್ತಿವೆ. ಅನೇಕರು ತಾವು ನಂಬುವ ಏಕೈಕ ಸುರಕ್ಷಿತ ತಾಣವಾದ ಭಾರತಕ್ಕೆ ಬಂದಿದ್ದಾರೆ. ವರ್ಷಗಳಿಂದ ಭಾರತ ದಲ್ಲಿ ನಿರಾಶ್ರಿತರಾಗಿ ಉಳಿದಿದ್ದಾರೆ. ಯಾವುದೇ ಕಾನೂನು ಬೆಂಬಲವಿಲ್ಲದ ಹತಾಶ ಜೀವನ ನಡೆಸುತ್ತಿದ್ದಾರೆ. ಈ ಜನರೇ ಪೌರತ್ವ ತಿದ್ದುಪಡಿ ಮಸೂದೆಯ ಗುರಿ. ವಿಶ್ವದಲ್ಲಿ ಬೇರೆ ದೇಶವಿಲ್ಲದ ಈ ನಿರಾಶ್ರಿತರನ್ನು ಮನೆಗೆ ಸೇರಿಸಿಕೊಳ್ಳುವುದರ ಮೂಲಕ ಅವರ ಭವಿಷ್ಯವನ್ನು ಭದ್ರಪಡಿಸುವುದು. ಅಲ್ಲದೆ, ಈ 3 ದೇಶಗಳಲ್ಲಿ ಕಷ್ಟದಿಂದ ಜೀವನ ಸವೆಸುತ್ತಿರುವವರಿಗೆ, ಅವರು ಭಾರತಕ್ಕೆ ಬರುವ ಆಯ್ಕೆ ಮಾಡಿಕೊಳ್ಳಬಹುದು ಎಂಬ ಸಂದೇಶ ನೀಡಲು ಈ ಮಸೂದೆ ಭರವಸೆಯ ದಾರಿದೀಪವಾಗಿ ಕಾರ್ಯನಿರ್ವಹಿಸುತ್ತದೆ.



ಇದು ಅತ್ಯಂತ ಸರಳವಾದ ಪ್ರತಿಪಾದನೆ. ಮಾನವೀಯ ಆಧಾರದ ಮೇಲೆ ರಾಜಕೀಯ ಪಕ್ಷಗಳು ಇದಕ್ಕೆ ಬೆಂಬಲ ನೀಡಬೇಕು. ಷರಿಯಾ ಕಾನೂನು ಆಡಳಿತದಲ್ಲಿ ಅಲ್ಪಸಂಖ್ಯಾತರಾಗಿ ಬಳಲುತ್ತಿರುವವರಿಗೆ ಆಶ್ರಯ ನೀಡುವುದನ್ನು ಯಾವುದೇ ಭಾರತೀಯ ವಿರೋಧಿಸಲು ಕಾರಣವಿಲ್ಲ. ಆದರೆ ಕೆಲವು ರಾಜಕೀಯ ಪಕ್ಷಗಳ ಮತ ಬ್ಯಾಂಕ್ ರಾಜಕೀಯವು ಈ ಪ್ರಯತ್ನಕ್ಕೂ ಸೋಂಕು ತಗಲಿಸಿದೆ. ಕಾಂಗ್ರೆಸ್, ಈ ಮಸೂದೆಯನ್ನು ಮುಸ್ಲಿಂ ವಿರೋಧಿ ಮತ್ತು ತಾರತಮ್ಯದಿಂದ ಕೂಡಿದೆ ಎಂಬ ಅಪಾಯಕಾರಿ ಪ್ರಚಾರವನ್ನು ನಡೆಸಿದೆ. ಇದು ಸಂಪೂರ್ಣ ಸುಳ್ಳು ಆಧರಿಸಿದ ಮಾತು. ಇವರ ವಾದಗಳಲ್ಲಿರುವ ಅಂಶವೆಂದರೆ ಇದು ಮುಸ್ಲಿಂ ವಿರೋಧಿ ಸಂವಿಧಾನ ವಿರೋಧಿ ಮತ್ತು ತಾರತಮ್ಯದಿಂದ ಕೂಡಿದ್ದು, ಇತರ ದೇಶಗಳ ನಿರಾಶ್ರಿತರಿಗೆ ಸಹ ಪೌರತ್ವ ನೀಡಬೇಕು ಎಂಬುದು. ಸಲ

ಹೊರಗೆ ಉಳಿದಿದ್ದಾರೆ.

ಈ ಸಂಪೂರ್ಣ ಚರ್ಚೆಯಲ್ಲಿ ಕಾಂಗ್ರೆಸ್ ಮತ್ತು ಅದರ ನೇತಾರ ರಾಹುಲ್ ಗಾಂಧಿ ನೀಡಿದ ಪ್ರತಿಕ್ರಿಯೆಗಳು ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಅವರ ಅಭಿಪ್ರಾಯದಂತೆಯೇ ಇತ್ತು. ಕಾಂಗ್ರೆಸ್‌ನಲ್ಲಿ ಕೆಲವರು, ಬಾಂಗ್ಲಾದೇಶದಂತಹ ದೇಶಗಳು ಮ್ಯಾನ್ಮಾರ್‌ನ ರೋಹಿಂಗ್ಯಾಗಳಿಗೆ ಆಶ್ರಯ ನೀಡಿಲ್ಲದಿದ್ದರೂ ನಾವು ನೀಡಬೇಕು ಎಂಬ ವಿಲಕ್ಷಣ ವಾದ ಮಂಡಿಸಿದರು. ಕಳೆದ 7 ದಶಕಗಳಲ್ಲಿ, ಅಕ್ರಮ ವಲಸೆ ಭಾರತಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಸಾಮಾಜಿಕ ಸ್ವರೂಪ, ಆರ್ಥಿಕತೆ, ಚುನಾವಣೆ, ರಾಷ್ಟ್ರೀಯ ಭದ್ರತೆಗಳ ಮೇಲೆ ಹಾನಿಕಾರಕ ಪರಿಣಾಮ ಬೀರುತ್ತಿದೆ. ಕಾಂಗ್ರೆಸ್ ದಶಕಗಳಿಂದ ಈ ವಿಷಯದೊಂದಿಗೆ ರಾಜಕೀಯ ಫುಟ್ಬಾಲ್ ಆಡಿದೆ ಮತ್ತು ಅದನ್ನು ಮುಂದುವರಿಸುತ್ತಿದೆ.

ಕಾಂಗ್ರೆಸ್‌ಗೆ ಮುಜುಗರವಾಗಬಲ್ಲ ಒಂದು ವಿಚಾರವಿದೆ. ಈ ನಿರಾಶ್ರಿತರ ವಿರುದ್ಧದ ಕಾಂಗ್ರೆಸ್‌ನ ಪ್ರಸ್ತುತ ವಿರೋಧವು, ಅದು ಈ ಹಿಂದೆ 1943ರಲ್ಲಿ ತಾನೇ ತೆಗೆದುಕೊಂಡಿದ್ದ ನಿಲುವುಗಳಿಗೆ ವಿರುದ್ಧವಾಗಿದೆ. ಆಗ ಅದು 'ಮುಸ್ಲಿಮೇತರ' ನಿರಾಶ್ರಿತರಿಗೆ ಪೌರತ್ವ ನೀಡಬೇಕೆಂದು ಒತ್ತಾಯಿಸಿತ್ತು. ತೀರಾ ಇತ್ತೀಚೆಗೆ, 2003ರಲ್ಲಿ, ಡಾ. ಮನಮೋಹನ್ ಸಿಂಗ್ ಅವರು ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫಘಾನಿಸ್ತಾನದ ಧಾರ್ಮಿಕ ನಿರಾಶ್ರಿತರಿಗೆ ಇದೇ ರೀತಿಯ ಪೌರತ್ವಕ್ಕಾಗಿ ಒತ್ತಾಯಿಸಿದರು. ಹೀಗಾಗಿ, ಜಾಣ ರಾಜಕೀಯ ಮರೆಗುಳಿತನ ಮತ್ತು ಮುಸ್ಲಿಂ ತುಷ್ಟೀಕರಣಗಳ ನಡುವೆ ಸಮತೋಲನ ಸಾಧಿಸಲು ಹೆಣಗುತ್ತಿರುವ ಕಾಂಗ್ರೆಸ್‌ನ ಬೂಟಾಟಿಕೆ ಬಹಿರಂಗಗೊಂಡಂತೆ ಆಗಿದೆ.

ಸ್ಪಷ್ಟವಾಗಿ ಹೇಳುವುದಾದರೆ, ಈ ಕಾಯಿದೆ ಭಾರತಕ್ಕೆ ವಲಸೆ ಬರಲು ಬಯಸುವ ಇತರ ಎಲ್ಲರಿಗೂ ಕಾನೂನು ವಲಸೆ ಪ್ರಕ್ರಿಯೆಯನ್ನು ಬದಲಾಯಿಸುವುದಿಲ್ಲ, ಇದು ಕಾನೂನಾತ್ಮಕ ವಲಸೆಯನ್ನು ಪ್ರೋತ್ಸಾಹಿಸುವುದಿಲ್ಲ ಅಥವಾ ನಿರುತ್ಸಾಹಗೊಳಿಸುವುದಿಲ್ಲ, ಪೌರತ್ವ ಬಯಸುವವರಿಗೆ ಕಾನೂನುಗಳು ಬದಲಾಗದೆ ಉಳಿದಿವೆ. ಕಾನೂನುಬದ್ಧ ಪೌರತ್ವವನ್ನು ಬಯಸುವವರು ಪ್ರಸ್ತುತ ಪೌರತ್ವ ಕಾಯ್ದೆಯಡಿಯಲ್ಲಿ ಸೂಚಿಸಲಾದ ಅಸ್ತಿತ್ವದಲ್ಲಿರುವ ಸಹಜ ಪ್ರಕ್ರಿಯೆಯನ್ನು ಬಳಸುವುದನ್ನು ಮುಂದುವರಿಸಬಹುದು.

ನರೇಂದ್ರ ಮೋದಿ ಸರಕಾರ ಅನುಸರಿಸುತ್ತಿರುವ ವಲಸೆಗೆ ಸಂಬಂಧಿಸಿದ-ವಿಶೇಷವಾಗಿ ಅಕ್ರಮ ವಲಸಿಗರು- ನೀತಿಯು ದೇಶದ ಹಿತಾಸಕ್ತಿಗಳಿಗೆ ಸಂಪೂರ್ಣವಾಗಿ ಹೊಂದಿಕೆಯಾಗುತ್ತದೆ. ಬಿಜೆಪಿ ತನ್ನ ವಿವಿಧ ಪ್ರಣಾಳಿಕೆಗಳಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ 2019ರ ಚುನಾವಣಾ